ಪ್ರಕಾರ ದಿನಾಂಕ: 01.06.87ರ ಪೂರ್ವದಲ್ಲಿ ಪ್ರಾರಂಭಗೊಂಡ ಖಾಸಗಿ ಶಿಕ್ಷಣ ಸಂಸ್ಥೆಗಳು ಸಹಾಯಾನುದಾನಕ್ಕೆ ಒಳಪಡಲು ಅರ್ಹರಿರುತ್ತವೆ. ಆದರೆ ದಿನಾಂಕ: 01.06.87 ಹಾಗೂ ತದನಂತರ ಪ್ರಾರಂಭಿಸಲಾದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದ ಇಲ್ಲ. ಇದಕ್ಕೆ ಅಪವಾದವನ್ನಾಗಿ (as an exception)

ಊ) ಮತ್ತು ಋ) ದಿನಾಂಕ 01.06.87ರಿಂದ 01.07.92ರ ಅವಧಿಯಲ್ಲಿ ಪ.ಜಾತಿ/ಪ.ಪಂಗಡಗಳಿಗೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ಪ್ರಾರಂಭಿಸಲಾದ ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದವನ್ನು ಕಲ್ಪಿಸಲಾಗಿದೆ. ಈ ರೀತಿ ಸದರಿ ನಿಯಮದ ಪ್ರಕಾರ, ಇತರೆ ವರ್ಗದ ಆಡಳಿತ ಮಂಡಳಿಗಳ ವತಿಯಿಂದ ದಿನಾಂಕ: 01.06.87 ಹಾಗೂ ತದನಂತರ ಪ್ರಾರಂಭಿಸಲಾದ ಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆಸ್ಪದ ಇಲ್ಲ.

ದಿನಾಂಕ: 01.06.87 ಹಾಗೂ ತನನಂತರ ಸಾಮಾನ್ಯ ವರ್ಗ ಮತ್ತು ಅಲ್ಪಸಂಖ್ಯಾತರಿಗೆ ಸೇರಿದ ಆಡಳಿತದ ಮಂಡಳಿಗಳ ವತಿಯಿಂದ ಪ್ರಾರಂಭಿಸಲಾದ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳು ಶಾಶ್ವತ ಅನುದಾನರಹಿತ (permanently unaided) ವೆಂದು ಪರಿಗಣಿಸಲಾಗಿದೆ.

507 (785) ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2003–04, 2004–05 ಮತ್ತು 2005–06 ನೇ ಸಾಲಿನಲ್ಲಿ ರಾಜಾಜಿನಗರ ಕೊಳಚೆ ಪ್ರದೇಶಗಳಲ್ಲಿ (ಘೋಷಿತ ಮತ್ತು ಅಘೋಷಿತ) ವಾಸವಾಗಿರುವ ಕಡು ಬಡವರ ಮನೆಗಳಿಗೆ ಬಿ.ಡಿ.ಎ. ಮತ್ತು ಬಿ.ಎಂ.ಸಿ. ವತಿಯಿಂದ ಹಕ್ಕುಪತ್ರ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಜನರಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ (ಪಾಲಿಕೆ ವಾರ್ಡ್‌ವಾರು ಪಟ್ಟಿ ಒದಗಿಸುವುದು);

ಇ) ಸರ್ಕಾರ ಘೋಷಿಸಿಕೊಂಡಿರುವ ಅವಧಿಯೊಳಗೆ ಹಕ್ಕುಪತ್ರಗಳ ವಿತರಣೆಯಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಪತ್ರಗಳನ್ನು ನಿಗದಿತ ಅವಧಿಯೊಳಗೆ ವಿತರಿಸಲಾಗಿದೆಯೇ?

ಶ್ರೀ ಎನ್. ಚಲುವರಾಯಸ್ವಾಮಿ (ವಸತಿ ಸಚಿವರ ಪರವಾಗಿ):

ಅ) ರಾಜಾಜಿನಗರ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಘೋಷಿತಗೊಂಡ 7 ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಂಡಳಿಯ ವತಿಯಿಂದ ಪರಿಚಯ ಪತ್ರಗಳನ್ನು ನೀಡಲಾಗಿದೆ. ಆದರೆ ಹಕ್ಕುಪತ್ರ ನೀಡಲಾಗಿರುವುದಿಲ್ಲ. ವಿವರಗಳನ್ನು ಅನುಬಂಧ–'ಅ' ನಲ್ಲಿ ಲಗತ್ತಿಸಿದೆ.

ಆ) ಘೋಷಿತಗೊಂಡ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ 1030 ಕುಟುಂಬಗಳಿಗೆ ಪರಿಚಯ ಪತ್ರ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ–ಅ

ಬೆಂಗಳೂರು ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳ ವಿವರ

ಕ್ರಸಂ.	ಕೊಳಚೆ ಪ್ರದೇಶದ ಹೆಸರು	ಮಾಲೀಕತ್ವ	ವಿಸ್ತೀರ್ಣ ಎ–ಗು	ಗುಡಿಸಲು ಸಂಖ್ಯೆ	ಜನಸಂಖ್ಯೆ
1	ಗಜಾನಾನಾ ಟಾಕೀಸ್, 1ನೇ ಹಂತ	ಖಾಸಗಿ	1–25	118	637
2	ಅಗ್ರಹಾರ ದಾಸರಹಳ್ಳಿ	ಸರ್ಕಾರಿ	2–20	387	2470
3	ಇಂದಿರಾನಗರ	ಖಾಸಗಿ/ಬಿಡಿಎ	1–06	128	887
4	ಗೊರಗುಂಟೆಪಾಳ್ಯ, ನಂದಿನಿ ಲೇಔಟ್	ಬಿಡಿಎ	2–29	135	891
5	ಬೋವಿ ಪಾಳ್ಯ	ಬಿಡಿಎ	1–20	163	1075
6	ಗಜಾನಾನಾ ಟಾಕೀಸ್, 2ನೇ ಹಂತ	ಸರ್ಕಾರಿ	0–05	50	312
7	ಭೀಮ್‌ಶಕ್ತಿನಗರ	ಬಿಡಿಎ	0–37	49	260
	ಒಟ್ಟು			**1030**	**6532**

508 (786) ಶ್ರೀ ನರೇಂದ್ರಬಾಬು ನೆ.ಲ. (ರಾಜಾಜಿನಗರ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರದ ವ್ಯಾಪ್ತಿಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ವಾಸಿಸುತ್ತಿರುವ ಜನರಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಆಶ್ರಯ ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಪ್ರದೇಶವಾರು ಮತ್ತು ವ್ಯಕ್ತಿವಾರು ವಿವರ ಒದಗಿಸುವುದು;

ಆ) ನಗರದಲ್ಲಿರುವ ಕಡು ಬಡವರಿಗೆ ಆಶ್ರಯ ಯೋಜನೆ ಅಡಿಯಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಯಾವುದು;

ಇ) ವಾಂಬೆ, ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಯೋಜನೆಯಂತೆ ಆಶ್ರಯ ಮನೆಗಳ ನಿರ್ಮಾಣ ಮಾಡಿ ಕಳೆದ 3 ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ (ವಿವರ ನೀಡುವುದು);

ಈ) ಈ ಯೋಜನೆಗಳ ಅಡಿಯಲ್ಲಿ ಹಂಚಿಕೆ ಮಾಡಲು ನಗರಕ್ಕೆ ಸಿದ್ಧಪಡಿಸಿಕೊಂಡಿರುವ ಫಲಾನುಭವಿಗಳು ಯಾರು ಯಾರು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರ ಪರವಾಗಿ):

ಅ) ಇಲ್ಲ.